ಬಗ್ಗೆಯೂ ಅಧಿಕಾರಿಗಳಿಗೆ ಹೇಳಿ, ಮಷಿನ್ ಬದಲಾವಣೆ ಮಾಡುವ ಬಗ್ಗೆ ಮತ್ತು ಖಾಯಂ ಆಗಿ ಯಾವ ರೀತಿ ರಿಪೇರಿ ಮಾಡಿದರೆ ಸರಿಹೋಗುತ್ತದೆ ಎನ್ನುವ ಬಗ್ಗೆ ನೋಡಿಕೊಂಡು ಈ ಬಾರಿಯ ಅನುದಾನದಲ್ಲಿ ಮಾಡಿಕೊಡುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ.ಟಿ.ಬಿ. ನಾಗರಾಜ್:– ರಿಪೇರಿ ಮಾಡಿದ್ದರೂ ಕಳೆದ ಆರು ತಿಂಗಳಿನಿಂದ ಹಣ ಕೊಟ್ಟಿರುವುದಿಲ್ಲ.

ಶ್ರೀ ಶಿವರಾಜ್ ಎಸ್. ತಂಗಡಗಿ:– ಈಗ ಯಾವ ಹಣ ಕೊಡಬೇಕೊ ಅದನ್ನು ಕೊಡುತ್ತೇವೆ. ಮತ್ತು ಮಷಿನ್‌ಗಳನ್ನು ರಿಪೇರಿ ಮಾಡಿಸಿಕೊಡುತ್ತೇವೆ.

ಸರ್ಕಾರಿ ಐ.ಟಿ.ಐ. ಕಾಲೇಜನ್ನು ಪ್ರಾರಂಭಿಸುವುದು

10 (2588); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ವಿಜಯಪುರ ಜಿಲ್ಲೆಯಲ್ಲಿರುವ ಸರ್ಕಾರಿ ಐಟಿಐ ಕಾಲೇಜುಗಳ ಸಂಖ್ಯೆ ಎಷ್ಟು; (ಮತಕ್ಷೇತ್ರವಾರು ಮಾಹಿತಿ ಒದಗಿಸುವುದು)

ಆ) ಸಿಂಧಗಿ ಮತಕ್ಷೇತ್ರದಲ್ಲಿ ಸರ್ಕಾರಿ ಐಟಿಐ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಇದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರಿ ಐಟಿಐ ಕಾಲೇಜನ್ನು ಯಾವ ಸಾಲಿನಿಂದ ಪ್ರಾರಂಭಿಸಲಾಗುವುದು? (ಪೂರ್ಣ ವಿವರ ನೀಡುವುದು)

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ವಿಜಯಪುರ ಜಿಲ್ಲೆಯಲ್ಲಿರುವ ಒಟ್ಟು 9 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ, ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

	ಮತ ಕ್ಷೇತ್ರ	ಸ್ಥಳ
1	ಮುದ್ದೇಬಿಹಾಳ	ಮುದ್ದೇಬಿಹಾಳ
2		ನಾಲತ್‌ವಾಡ
3	ವಿಜಯಪುರ	ವಿಜಯಪುರ
4		ನಿಡಗುಂದಿ
5	ಬಸವನಬಾಗೇವಾಡಿ	ಬಸವನಬಾಗೇವಾಡಿ
6	ದೇವರಹಿಪ್ಪರಗಿ	ದೇವರಹಿಪ್ಪರಗಿ
7	ಇಂಡಿ	ಇಂಡಿ
8	ಬಬಲೇಶ್ವರ	ಬಬಲೇಶ್ವರ
9		ತಿಕೋಟ

ಆ) ಹೌದು.

ಇ) 2014–15ನೇ ಸಾಲಿನಿಂದ ಸರ್ಕಾರಿ ಆದೇಶಗಳ ಸಂಖ್ಯೆ ಕಾಇ 225 ಇಟಿಐ 2013 (ಭಾಗ–1) ಬೆಂಗಳೂರು, ದಿನಾಂಕ 13–06–2014ರ ಅನ್ವಯ ಸಿಂಧಗಿ ತಾಲ್ಲೂಕಿನ ದೇವರಹಿಪ್ಪರಗಿಯಲ್ಲಿ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಮಂಜೂರು ಮಾಡಲಾಗಿದೆ.

ಶ್ರೀ ಭೂಸನೂರ ರಮೇಶ್ ಬಾಳಪ್ಪ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ವಿಜಾಪುರ ಜಿಲ್ಲೆಯಲ್ಲಿ 8 ಮತಕ್ಷೇತ್ರಗಳಿವೆ. ಏಳು ಮತಕ್ಷೇತ್ರಗಳಲ್ಲಿ ಐ.ಟಿ.ಐ. ಕಾಲೇಜುಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಆದರೆ ನಾನು ಬಿ.ಜೆ.ಪಿ. ಶಾಸಕನಾಗಿರುವುದರಿಂದ ನನ್ನ ಮತಕ್ಷೇತ್ರಕ್ಕೆ ಐ.ಟಿ.ಐ. ಕಾಲೇಜ್ ಅನ್ನು ಮಂಜೂರು ಮಾಡಿರುವುದಿಲ್ಲ. ವಿಜಾಪುರ ಜಿಲ್ಲೆಯಲ್ಲಿ 9 ಐ.ಟಿ.ಐ. ಕಾಲೇಜ್‌ಗಳಿವೆ. ಒಂಭತ್ತು ಕಾಲೇಜ್‌ಗಳಲ್ಲಿ ಒಂದಾದರೂ ಸಿಂಧಗಿ ಮತಕ್ಷೇತ್ರಕ್ಕೆ ಕೊಡಬೇಕು.

ಅಧ್ಯಕ್ಷರು:– ಈಗ ಏನಾಗಬೇಕೆಂದು ಹೇಳಿ.

ಶ್ರೀ ಭೂಸನೂರ ರಮೇಶ್ ಬಾಳಪ್ಪ:– ನನ್ನ ಕ್ಷೇತ್ರಕ್ಕೆ ಸರ್ಕಾರಿ ಐ.ಟಿ.ಐ. ಕಾಲೇಜ್ ಅನ್ನು ಕೊಡಬೇಕು. ತಾವು ಸರ್ಕಾರಕ್ಕೆ ನಿರ್ದೇಶನವನ್ನು ಕೊಡಬೇಕು.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ, ಕಾರ್ಮಿಕ ರಾಜ್ಯ ಸಚಿವರು:– ಮಾನ್ಯ ಅಧ್ಯಕ್ಷರೆ, ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ 2 grant–in-aid ಮತ್ತು 12 ಖಾಸಗಿ ಕೈಗಾರಿಕಾ ಸಂಸ್ಥೆಗಳು ಕೌಶಲ್ಯ ತರಬೇತಿಯನ್ನು ಕೊಡುತ್ತಿವೆ.

ಅಧ್ಯಕ್ಷರು:– ಅವರ ಕ್ಷೇತ್ರಕ್ಕೆ ಕೊಟ್ಟಿಲ್ಲ, ಹಾಗಾಗಿ ಅವರ ಕ್ಷೇತ್ರಕ್ಕೆ ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಅನುದಾನದ ಲಭ್ಯತೆಯನ್ನು ನೋಡಿಕೊಂಡು ಐ.ಟಿ.ಐ. ಕಾಲೇಜ್ ಅನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ.ಟಿ. ರವಿ:– ಮಾನ್ಯ ಸಚಿವರೆ, ನಮಗೆಲ್ಲಾ ಕೊಟ್ಟಿದ್ದೀರಿ, ಅವರಿಗೂ ಕೊಟ್ಟು ಬಿಡಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಈ ರೀತಿ open ಆಗಿ ಪಕ್ಷಪಾತ ಮಾಡುವುದು ಸರಿಯಲ್ಲ. 8 ವಿಧಾನಸಭಾ ಕ್ಷೇತ್ರಗಳಲ್ಲಿ ಏಳು ಕಡೆ ಕಾಂಗ್ರೆಸ್ ಎಂ.ಎಲ್.ಎ. ಗಳಿದ್ದು, ಸಿಂಧಗಿಯಲ್ಲಿ ಮಾತ್ರ ನಮ್ಮ ಪಕ್ಷದ ಶಾಸಕರಿದ್ದಾರೆ. ಸಿಂಧಗಿ ಬಿಟ್ಟು ಉಳಿದ ಕಡೆ ಮಂಜೂರು ಮಾಡುವುದು ಅನ್ಯಾಯದ ಪರಮಾವಧಿಯಲ್ಲವೇ? ಅಲ್ಲಿಯೂ ಕೂಡ sanction ಮಾಡಿ. ಈ ರೀತಿ ಏಕೆ ಅನ್ಯಾಯ ಮಾಡುತ್ತೀರಿ.

ಶ್ರೀ ಸಿ.ಟಿ ರವಿ:– ಹೆಸರಿಗೆ ತಕ್ಕಂತೆ ಪರಮೇಶ್ವರನಾಗಿ ಕೊಡಿ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಕೌಶಲ್ಯ ತರಬೇತಿ ಕೇಂದ್ರವಾಗಿದ್ದರೂ ಕೂಡ ಅದನ್ನು ಪ್ರಾರಂಭ ಮಾಡಿರುವುದಿಲ್ಲ. ಆಗ ಮಂಜೂರಾಗಿರುವ ಕೌಶಲ್ಯ ತರಬೇತಿ ಕೇಂದ್ರ ಇನ್ನೂ ಪ್ರಾರಂಭವಾಗಿರುವುದಿಲ್ಲ.

ಅಧ್ಯಕ್ಷರು:– ಅವರ ಕ್ಷೇತ್ರಕ್ಕೆ ಇಲ್ಲವೆಂದು ಹೇಳುತ್ತಿರುವುದರಿಂದ, ದಯಮಾಡಿ ಅವರಿಗೆ ಒಂದು ಪಾಸಿಟಿವ್ ಉತ್ತರವನ್ನು ಕೊಡಿ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಅವರ ಬಗ್ಗೆ ಅಪಾರವಾದ ಗೌರವವಿದೆ. ಇಲ್ಲಿ ತಾರತಮ್ಯ ಮಾಡುವಂತಹ ಪ್ರಶ್ನೆಯಿಲ್ಲ. ಒಂದು ವೇಳೆ ತಾರತಮ್ಯ ಮಾಡುವುದಿದ್ದರೆ, ಸಿ.ಟಿ.ರವಿ ಅವರಿಗೆ ಕಾಲೇಜ್ ಏಕೆ ಕೊಡುತ್ತಿದ್ದೆವು. ಅನುದಾನದ ಲಭ್ಯತೆಯನ್ನು ನೋಡಿಕೊಂಡು examine ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಏಳು ಕಡೆ ಕೊಟ್ಟು, ಒಂದು ಕಡೆ ಬಿಟ್ಟಿದೆಯೆಂದರೆ. ಅದನ್ನು ಉದ್ದೇಶಪೂರ್ವಕವಾಗಿಯೇ ಮಾಡಿದ್ದಾರೆಂದು ಎನಿಸುತ್ತದೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಖಂಡಿತವಾಗಿಯೂ ಈ ಸಾರಿ ಅನುದಾನದ ಲಭ್ಯತೆಯನ್ನು ನೋಡಿಕೊಂಡು examine ಮಾಡುತ್ತೇನೆ. ನಾನು ತಾರತಮ್ಯ ಮಾಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಸಚಿವರೆ, ನೀವು ಏಳು ಕಡೆ ಕೊಟ್ಟಿದ್ದೀರಿ. ಆ ಏಳೂ ಕಡೆ ಕಾಂಗ್ರೆಸ್ ಪಕ್ಷದ ಶಾಸಕರೇ ಇದ್ದಾರೆ. ಈ ಒಂದು ಕಡೆ ಮಾತ್ರ ಬಿ.ಜೆ.ಪಿ. ಅವರು ಇರುವುದರಿಂದ ಎದ್ದು ಕಾಣುತ್ತದೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಖಂಡಿತವಾಗಿಯೂ ತಾರತಮ್ಯ ಮಾಡಿಲ್ಲ. ಈ ಬಗ್ಗೆ examine ಮಾಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ, ನಮ್ಮಲ್ಲಿ ಕೌಶಲ್ಯ ತರಬೇತಿ ಕೇಂದ್ರ ಆಗಿದ್ದರೂ ಪ್ರಾರಂಭ ಮಾಡಿರುವುದಿಲ್ಲ.

ಅಧ್ಯಕ್ಷರು:– ಬೇಡ. ವಿಶ್ವನಾಥ್ ಅವರೇ ಹೇಳಿ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಮಾನ್ಯ ಅಧ್ಯಕ್ಷರೆ, ಜೀವರಾಜ್ ಅವರು ಬಹಳ ಒಳ್ಳೆಯ ಸ್ನೇಹಿತರು. ಅವರು ಕೌಶಲ್ಯ ತರಬೇತಿ ಕೇಂದ್ರದ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಲಿ, ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್:– ಆ ರೀತಿ ಕೇಳಿದರೆ ಮಾಹಿತಿ ಕೊಡುವುದಿಲ್ಲ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ನನ್ನ ಬಳಿ ಈಗ ಮಾಹಿತಿ ಇಲ್ಲ.

ಶ್ರೀ ಡಿ.ಎನ್. ಜೀವವರಾಜ್:– ಮಾಹಿತಿಯನ್ನು ತಂದು ಕೊಡುತ್ತೇನೆ.